ಕಂದಾ ಬೇಡವೊ ಮಣ್ಣು ತಿನ್ನ ಬೇಡವೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 164.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 138.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these wordings.

ರಾಗ: ಕಮಾಚ್ ತಾಳ: ಅಟ

ಕಂದಾ ಬೇಡವೊ ಮಣ್ಣು ತಿನ್ನ ಬೇಡವೊ || ಪ ||

ಕಂದಾ ಬೇಡವೊ ಮಣ್ಣು ತಿನ್ನಲಿ ಬೇಡವೊ
ಸುಂದರಾಂಗನೆ ನಿನಗೆ ಹೊಟ್ಟೆ ನೋಯುವುದಯ್ಯ || ಅಪ ||

ಬೇಗನೆ ಏಳಯ್ಯ, ಮಣ್ಣಾಟ ಬಿಡೊ ನೀನು
ಜೋಗಿ ಬರುತಾನಲ್ಲಿ ಅಂಜಿಸುವುದಕೀಗ || 1 ||

ತಾಯಿ ಮಾತನು ಒತ್ತಿ ಕರದಲಿ ಮಣ್ಣೊತ್ತಿ
ಬಾಯಲಿ ಇಟ್ಟನು ಬಾಲಕೃಷ್ಣಯ್ಯನು || 2 ||

ಪೆಟ್ಟು ಕೊಡುವೆ ನಿನಗೆ ಸಿಟ್ಟು ಬಹಳ ಇದೆ
ಮುಟ್ಟಬೇಡೊ ಮಣ್ಣು ಬೆಣ್ಣೆ ತರುವೆನಯ್ಯ || 3 ||

ಅಮ್ಮಯ್ಯ ಕೇಳೆಲೆ ಬಾಯಲಿ ಮಣ್ಣಿಲ್ಲ

ಗುಮ್ಮನು ಬರಬೇಡ ಸುಮ್ಮನೆ ಇರುತೇನೆ || 4 ||

ಮಗುವೆ ಬಾ ಬಾ ಎಂದು ಬಣ್ಣಿಸಿ ಕರೆದಳು
ಮಗುವಿನ ಬಾಯ ಶೋಧಿಸಿದಳು ಬೇಗನೆ || 5 ||

ಬಾಯಲಿ ಕಂಡಳು ಹದಿನಾಲ್ಕು ಲೋಕವ
ಕಾಯ ಮರೆತಳಯ್ಯ ಮರುಳಿಗೆ ವಶವಾಗಿ || 6 ||

ಮತ್ತು ಕಂಡಳು ಅವಳು ಗೋಕುಲವೆಲ್ಲವ
ಅತ್ತ ಕಂಡಳು ತನ್ನ ಕೃಷ್ಣನ ಬಗಲಲಿ || 7 ||

ಗೋಪ್ಯೇರ ಮನೆಗಳಲಿ ಗೋಪಾಲಕೃಷ್ಣನು
ಗೋಪ್ಯೇರ ಮನೆಯಂತೆ ದುಡುಕು ಮಾಡುತಲಿರ್ದ || 8 ||

ಬಾಲನು ಬೀದಿಯ ಮಣ್ಣೆತ್ತಿ ಉಣುತಿರ್ದ
ಬಾಲೆ ಗೋಪ್ಯಮ್ಮನು ಮಣ್ಣ ತೆಗೆತಿರ್ದಳು || 9 ||

ಕಂದನು ನೀನಲ್ಲ ಕಂದರ್ಪ ಜನಕನೆ
ಕಂದನೆ ನಿನ್ನ ಬಾಯ ಮುಚ್ಚಿಕೊಳ್ಳಯ್ಯ ಈಗ || 10 ||

ದೇವಾದಿದೇವನೆ ದೇವಕಿ ತನಯನೆ
ಭಾವಜನಯ್ಯನೆ ಬಾರಯ್ಯ ದೊರೆಯೆ || 11 ||

ಜಯಗಳಾಗಲಿ ನಮ್ಮ ಕೃಷ್ಣ ರಾಯಗೆ ಬಹಳ
ಜಯಗಳಾಗಲಿ ಅವನ ಭಕ್ತರ ವೃಂದಕೆ || 12 ||

ಲೀಲಾ ವಿನೋದನು ರುಕ್ಮಿಣೀ ಲೋಲನು
ಲೀಲೆ ತೋರಿದನಂದು ತಂದೆ ಪುರಂದರ ವಿಠಲ || 13 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಇದು ಪ್ರಸಿದ್ಧವಾದ ಬಾಲಲೀಲೆ. ಆದರೆ ಕೃಷ್ಣಕರ್ಣಾಮೃತದಲ್ಲಿ ಸಂದರ್ಭ ಬೇರೆಯಾಗಿ ಬಂದಿದೆ (ನೋಡಿ 'ಕೃಷ್ಣೇನಾಂಬ ಗತೇನ ರಂತುಮಧುನಾ' ಎಂಬ ಶ್ಲೋಕ). ಕೃಷ್ಣನು ಓರಗೆಯವರೊಂದಿಗೆ ಆಡುತ್ತಿರುವಾಗ ಮಣ್ಣು ತಿನ್ನಲು, ಅಣ್ಣ ಬಲರಾಮನು ತಾಯಿಯ ಬಳಿ ಓಡಿ ದೂರುತ್ತಾನೆ. ತಾಯಿಯು ಬಂದು 'ಎಲೋ, ಮಣ್ಣು ತಿನ್ನುವೆಯಾ?' ಎಂದು ಗದರಿಸಲು ಕೃಷ್ಣನು 'ಇಲ್ಲವಮ್ಮಾ, ಅಣ್ಣನು ಸುಳ್ಳು ಹೇಳುತ್ತಿದ್ದಾನೆ' ಎಂದುತ್ತರ ಕೊಡಲು, ತಾಯಿ ನಂಬದೆ, 'ಎಲ್ಲಿ ನಿನ್ನ ಬಾಯಿ ತೆರೆದು ತೋರಿಸು' ಎನ್ನುತ್ತಾಳೆ. ಆಗ ಕೃಷ್ಣನು ಆಯೆಂದು ಬಾಯಿ ತೆರೆಯಲು, ತಾಯಿ ಅದರಲ್ಲಿ ಹದಿನಾಲ್ಕು ಲೋಕಗಳನ್ನೂ, ತನ್ನನ್ನೂ, ಪ್ರಸ್ತುತ ಪ್ರಸಂಗವನ್ನೂ ಕಂಡು ಆಶ್ಚರ್ಯಪಡುತ್ತಾಳೆ.

Classification: Keerthane
Ankita: tande purandara vittala
Location: NA
Category: Krishna Stuti, Bala Krishna Leele
Sub-Category: koosu, udara, benne, tayi, bayi, kai, sittu, gumma, loka, deha, gokula, gopi, mane, deva, Devaki, arasa, bhakta, Rukmini,
Pravachana:
Explanation: NA